# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 53/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 19-07-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಭಾನುದಾಸ ಪಿಂಪಳೆ | **ಪ್ರಾ.ಸಾ ಃ 07** |
| **ತಂದೆ ಃ ಗಂಡ ಹೆಸರು** | ಃ | ನಾಥಾ | **ಚಾ.ಸಾ ಃ 08** |
| **ವಯಸ್ಸು** | ಃ | 39 ವರ್ಷ | |
| **ಉದ್ಯೋಗ** | ಃ | ಸೀನಿಯರ ಮ್ಯಾನೇಜರ, ಯುನಿಯನ್ ಬ್ಯಾಂಕ ಆಪ್ ಇಂಡಿಯ ಅಡಿಟ್ ಆಫೀಸ್, ಪುನೆ | |
| **ವಾಸಸ್ಥಳ** | ಃ | ಪುನೆ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ಜುಲೈ 2017 ರಿಂದ ಜುಲೈ 2019 ರವರೆಗೆ ಧಾರವಾಡ ಕಾರ್ಪೋರೇಷನ ಬ್ಯಾಂಕನಲ್ಲಿ ಮ್ಯಾನೇಜರ ಎಂದು ಕರ್ತವ್ಯನಿರ್ಹಿಸಿರುತ್ತೇನೆ.

ನನಗೆ ಆರೋಪಿತರ ಪರಿಚಯ ಇಲ್ಲ. ನಾನು ಧಾರವಾಡದ ಸಪ್ತಾಪುರ ಬ್ಯಾಂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪೋಲೀಸರು ನಮ್ಮ ಬ್ಯಾಂಕಿಗೆ ಬಂದು ರೇವಣಕರ ಮೋರ್ಟಸ ಮಾಲೀಕ ಉಳವಪ್ಪ ಕೋಟಿ ಹಾಗೂ ಭಾಗ್ಯಲಕ್ಷ್ಮಿ ಮೋರ್ಟಸ ಮಾಲೀಕ ನಿಂಗರಾಜ ಸಿದ್ದಪ್ಪನವರ ಇವರ ದಾಖಲೆಗಳನ್ನು ಕೋರಿದ್ದು ದಾಖಲೆಗಳನ್ನು ಕೇಳಿದ್ದರು. ಸದರಿಯವರ ಬ್ಯಾಂಕ ಖಾತೆ ಹಾಗೂ ಬ್ಯಾಂಕ ಖಾತೆ ತೆಗೆಯುವಾಗ ಸಲ್ಲಿಸಿದ ಫಾರಂ ನೀಡುವಂತೆ ಮನವಿ ಸಲ್ಲಿಸಿದ್ದರು. ಕಾರ್ಪೋರೇಷನ ಬ್ಯಾಂಕಿನ ಅಕೌಂಟ ಸ್ಟೇಟಮೆಂಟನ್ನು ನಿಪಿ-24 ಹಾಗೂ ಅರ್ಜಿಯನ್ನು ನಿಪಿ-25 ಎಂದು, ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ಸದರಿ ದಾಖಲೆಗಳೊಂದಿಗೆ ಆಧಾರ ಕಾರ್ಡ, ಪಾನ ಕಾರ್ಡ, ಕಾರ್ಮಿಕೆ ಇಲಾಖೆ ಪತ್ರ, ಚುನಾವಣಾ ಆಯೋಗದ ಗುರುತಿನ ಚೀಟಿಯ ಜರಾಕ್ಸ ಪ್ರತಿಗಳನ್ನು ಲಗತ್ತಿಸಲಾಗಿದೆ. ನಾನು ದಾಖಲೆಗಳನ್ನು ಪೋಲೀಸರಿಗೆ ನೀಡಿದ ಬಗ್ಗೆ ಹೇಳಿಕೆ ನೀಡಿಲ್ಲ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,** ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ಪೋಲೀಸರಿಗೆ ದಾಖಲೆಗಳನ್ನು ಪೊರೈಸಿದ ಬಗ್ಗೆ ಹೇಳಿಕೆ ನೀಡಿದ್ದೇನೆ ಅಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ದಾಖಲೆಗಳನ್ನು ದೃಡಿಕರಿಸಿ ಕೊಟ್ಟಿರುತ್ತೇನೆ. ದಾಖಲೆಗಳ ಮೇಲೆ ನಾನು ಸೀಲ ಹಾಕಿ ಸಹಿ ಮಾಡಿದ್ದೇನೆ. ಸದರಿ ದಾಖಲೆಗಳಿಗೆ ದೃಡಿಕೃತ ಪ್ರತಿಗಳು ಎಂದು ನಮೂದಿಸಿಲ್ಲ. ಪೋಲೀಸರು ನನಗೆ ದಾಖಲೆಗಳನ್ನು ನೀಡುವಂತೆ ಅರ್ಜಿ ಕೊಟ್ಟಿದ್ದರು ಆದರೆ ದಿನಾಂಕ ನೆನಪಿಲ್ಲ. ನನಗೆ ವಯಕ್ತಿಕವಾಗಿ ಯಾವುದೆ ನೋಟೀಸ ಕೊಟ್ಟಿಲ್ಲ.

ಬ್ಯಾಂಕಿನ ಮ್ಯಾನೇಜರ ಹೆಸರಿನಲ್ಲಿ ಅರ್ಜಿ ಕೊಟ್ಟಿದ್ದಾರೆ. ದಾಖಲೆಗಳನ್ನು ಪಡೆದುಕೊಳ್ಳುವಾಗ ಪಂಚನಾಮೆ ಜರುಗಿಸಿಲ್ಲ. ನನಗೆ ಪ್ರಕರಣದ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ. ಆದರೆ ಸ್ಟೇಟ್ ಬ್ಯಾಂಕಿನಲ್ಲಿ ಮೋಸ ಆಗಿದೆ ಎಂದು ಮಾತ್ರ ಗೊತ್ತಿದೆ. ನಿಪಿ-25 ರಲ್ಲಿ ಉಳವಪ್ಪ ತಂದೆ ಹೆಸರನ್ನು ತಪ್ಪಾಗಿ ನಮೂದಿಸಲಾಗಿದೆ ಎನ್ನುವದು ನನಗೆ ಗೊತ್ತಿಲ್ಲ. ಖಾತೆಯನ್ನು ನಮ್ಮ ಹಿಂದಿನ ಅಧಿಕಾರಿಗಳು ತೆಗೆದಿದ್ದು ಅವರ ಹೆಸರು ಗೊತ್ತಿಲ್ಲ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡು ಅದನ್ನು ನನಗೆ ಓದಿ ಹೇಳಿದ್ದಾರೆ. ಪೋಲೀಸರು ನನ್ನ ಹೇಳಿಕೆ ಪಡೆದಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಖಾತೆಯನ್ನು ಯಾರು ತೆಗೆದಿದ್ದಾರೆಂದು ಮಾಹಿತಿ ಬೇಕಾಗಿದ್ದರಿಂದ ದಾಖಲೆಯನ್ನು ಪಡೆದುಕೊಂಡಿದ್ದಾರೆ. ಇದನ್ನು ಹೊರತು ಪಡಿಸಿ ನನಗೆ ಬೇರೆ ಯಾವುದೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ.

(ಸಾಕ್ಷಿ ವಿಚಾರಣೆಯನ್ನು ವ್ಯಾಟ್ಸಪ್ ಮೊಬೈಲ ಆಡಿಯೋ ವಿಡಿಯೋ ಕಾಲ ಮುಖಾಂತರ ಪಡೆದುಕೊಂಡಿದ್ದು ಸಾಕ್ಷಿಯ ಸಹಿ ಇರುವುದಿಲ್ಲ)

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**